ಚುಟುಕು ಸುದ್ದಿ

ರೈತರ ವಿವಿಧ ಬೇಡಿಕೆಗಾಗಿ ಜಿಲ್ಲಾಧಿಕಾರಿಗೆ ಮನವಿ

ಬ್ಯಾಡಗಿ: ಬ್ಯಾಂಕ್ ಹಾಗೂ ಫೈನಾನ್ಸ್‌ಗಳು ರೈತರಿಗೆ ತೊಂದರೆ ನೀಡುವ ಮೂಲಕ ಹಣ ವಸೂಲಿ ಮಾಡುವುದು ನಿಲ್ಲಿಸಬೇಕು. ಹಗಲುರಾತ್ರಿ ಏಳು ತಾಸು ತ್ರೀಫೇಸ್ ನೀಡುವುದು, ಬೆಳೆಪರಿಹಾರ, ಆಣೂರು, ಬುಡಪನಹಳ್ಳಿ ಕೆರೆಗಳಿಗೆ ನೀರು ತುಂಬಿಸುವುದು ಇತ್ಯಾದಿ ಸಮಸ್ಯೆಗಳ ಕುರಿತು ಜನತಾ ದರ್ಶನದಲ್ಲಿ ರೈತಸಂಘದ ಕಾರ್ಯಕರ್ತರು ಜಿಲ್ಲಾಧಿಕಾರಿ ರಘುನಂದನಮೂರ್ತಿ ಅವರಿಗೆ ಮಂಗಳವಾರ ಮನವಿ ಅರ್ಜಿ ಸಲ್ಲಿಸಿದರು.

ರೈತಮುಖಂಡ ಮಲ್ಲಿಕಾರ್ಜುನ ಬಳ್ಳಾರಿ ಮಾತನಾಡಿ, ರೈತರು ಬರಗಾಲದಲ್ಲಿ ಸಿಲುಕಿ ಸಂಕಷ್ಟದಲ್ಲಿ ಮುಳುಗಿದ್ದಾರೆ. ಆದರೆ ಕೆಲ ಬ್ಯಾಂಕ ಹಾಗೂ ಖಾಸಗಿ ಫೈನಾನ್ಸಗಳ ವ್ಯವಸ್ಥಾಪಕರು ರೈತರಿಗೆ ನೋಟಿಸ್ ಜಾರಿಮಾಡುವುದು, ಸಿಬ್ಬಂದಿಗಳನ್ನು ಕಳುಹಿಸುವ ಮೂಲಕ ರೈತರಿಗೆ ವಿನಾಕಾರಣ ತೊಂದರೆ ನೀಡುವುದನ್ನು ತಪ್ಪಿಸಬೇಕು. ಕೊಳವೆಬಾವಿ ನಂಬಿ ಬೀಜ ಬಿತ್ತಿದ ರೈತರ ಬೆಳೆ ಸಂಪೂರ್ಣವಾಗಿ ಕೈಗೆ ಸಿಕ್ಕಿಲ್ಲ, ಹೆಸ್ಕಾಂ ಅಧಿಕಾರಿಗಳು ಎರಡ್ಮೂರು ತಾಸು ವಿದ್ಯುತ್ ಪೂರೈಸುವ ಮೂಲಕ ರೈತರ ಬೆಳೆಹಾನಿಗೆ ಕಾರಣರಾಗಿದ್ದಾರೆ. ಸರ್ಕಾರ 369 ಕೋ.ರೂ. ಖರ್ಚುಮಾಡಿ ಆಣೂರು, ಬುಡಪನಹಳ್ಳಿ ಕೆರೆ ನೀರು ತುಂಬಿಸುವ ಯೋಜನೆ ಆರಂಭಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ಕೆರೆತುಂಬಿಸಲು ಯೋಜನೆ ಕಾರ್ಯಗತಗೊಳಿಸಿ. ತಾಲೂಕನ್ನು ಬರಗಾಲಪಟ್ಟಿಗೆ ಸೇರ್ಪಡೆ ಮಾಡಿರುವುದು ಸಂತಸವಾಗಿದೆ. ಆದರೆ ರೈತರಿಗೆ ಬೆಳೆಹಾನಿ, ಬೆಳೆವಿಮೆ ನೀಡುತ್ತಿಲ್ಲವೆಂದು ಆರೋಪಿಸಿದರು.

ಪರಿಹಾರ ನೀಡುವ ಭರವಸೆ: ಜಿಲ್ಲಾಧಿಕಾರಿಗಳು ಮಾತನಾಡಿ, ಸಭೆಯಲ್ಲಿದ್ದ ಹೆಸ್ಕಾಂ, ನೀರಾವರಿ, ವಿಮೆ ಅಧಿಕಾರಿಗಳನ್ನು ಕರೆಸಿ ಚರ್ಚಿಸಿದರು. ನೋಡ್ರಿ ಎಲ್ಲ ಸಮಸ್ಯೆ ಪರಿಹರಿಸಲು ಸ್ವಲ್ಪ ಸಮಯ ಬೇಕಿದೆ. ಮದ್ಯಂತರ ಬೆಳೆವಿಮೆಯನ್ನು ರಾಜ್ಯದಲ್ಲಿ ಹಾವೇರಿ ಜಿಲ್ಲೆಗೆ ಮೊದಲು ನೀಡಲಾಗುತ್ತಿದೆ.ಇದಕ್ಕೆ ಸಾಕಷ್ಟು ತಾಂತ್ರಿಕ ದೋಷಗಳಿದ್ದು, ಎಲ್ಲವೂ ಸರಿಯಾಗಲಿವೆ. ಬೆಳೆಪರಿಹಾರ ಸರ್ಕಾರ ಶೀಘ್ರದಲ್ಲೆ ಪ್ರಕಟಿಸಲಿದ್ದು, ಮಂಜೂರಾದ ತಕ್ಷಣ ನೀಡುವುದಾಗಿ ಭರವಸೆ ನೀಡಿದರು.

ಈ ವೇಳೆ ರೈತಮುಖಂಡರಾದ ಗಂಗಣ್ಣ ಎಲಿ, ನಿಂಗಪ್ಪ ಹೆಗ್ಗಣದ, ಮಂಜು ತೋಟದ, ಕೆ.ವಿ. ದೊಡ್ಡಗೌಡ್ರ, ಮಂಜಯ್ಯಸ್ವಾಮಿ ಹಿರೇಮಠ ಇತರರಿದ್ದರು.

ವಿವಿಧ ಸಸಿಗಳು ಮಾರಾಟಕ್ಕೆ ಲಭ್ಯ

ಹಾವೇರಿ: ಜಿಲ್ಲೆಯ ತೋಟಗಾರಿಕೆ ಇಲಾಖೆಯ ಅಧೀನದ ತೋಟಗಾರಿಕೆ ಕ್ಷೇತ್ರ ಹಾಗೂ ನರ್ಸರಿಗಳಲ್ಲಿ ಉತ್ತಮ ಗುಣಮಟ್ಟದ ಕಸಿ ಮತ್ತು ಸಸಿಗಳು ರೈತರಿಗೆ ಹಾಗೂ ಸಾರ್ವಜನಿಕರಿಗೆ ಇಲಾಖೆಯ ಎಸ್.ಆರ್ ದರದಲ್ಲಿ ನೀಡಲಾಗುತ್ತದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

ಹಾನಗಲ್, ಸವಣೂರು ಹಾಗೂ ಯತ್ತಿನಹಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ ಅಡಿಕೆ(ರೂ.25/-) ಸಸಿಗಳು, ಚೌಡಯ್ಯದಾನಪುರ, ಹಂಸಭಾವಿ, ಸವಣೂರು ತೋಟಗಾರಿಕೆ ಕ್ಷೇತ್ರದಲ್ಲಿ ತೆಂಗು(ರೂ.75/-) ಸಸಿಗಳು, ಹಾನಗಲ್ ತೋಟಗಾರಿಕೆ ಕ್ಷೇತ್ರದಲ್ಲಿ ತೆಂಗು ಹೈಬ್ರಿಡ್(ರೂ.170/-)ಸಸಿಗಳು, ಸವಣೂರ ತೋಟಗಾರಿಕೆ ಕ್ಷೇತ್ರದಲ್ಲಿ ಕರಿಬೇವು(ರೂ.15/-) ಸಸಿಗಳು, ಸವಣೂರು ಹಾಗೂ ಯತ್ತಿನಹಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ ನಿಂಬೆ (ರೂ.20 ಹಾಗೂ ರೂ.30/-) ಸಸಿಗಳು, ಸವಣೂರು ಹಾಗೂ ಯತ್ತಿನಹಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ ಮಾವು(ರೂ:42/-) ಹಾಗೂ ಹಾವೇರಿ ಕಚೇರಿ ನರ್ಸರಿಯಲ್ಲಿ ಅಲಂಕಾರಿಕ ಗಿಡಗಳು(ರೂ:25/-) ಮಾರಾಟಕ್ಕೆ ಲಭ್ಯವಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನತಾ ದರ್ಶನ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ರಘುನಂದನ ಮೂರ್ತಿ ಸೂಚನೆ

ಸರ್ಕಾರದ ಎಲ್ಲ ಯೋಜನೆ ಫಲಾನುಭವಿಗಳಿಗೆ ತಲುಪಿಸಿ

ಉದಯಕಾಲ ನ್ಯೂಸ್

ಬ್ಯಾಡಗಿ: ಸಾರ್ವಜನಿಕರಿಗೆ ಮನೆ ಬಾಗಿಲಿಗೆ ಸೌಲಭ್ಯ ಕಲ್ಪಿಸುವ ಹಾಗೂ ಸರ್ಕಾರದ ಎಲ್ಲ ಯೋಜನೆಗಳು ಕಟ್ಟ ಕಡೆಯ ವ್ಯಕ್ತಿಗೂ ತಲುಪಿಸಬೇಕು. ಕೆಲ ಸಮಸ್ಯೆಗಳಿಗೆ ಕಚೇರಿ ಅಲೆದಾಟ ತಪ್ಪಿಸುವ ಮಹತ್ವಾಕಾಂಕ್ಷೆ ಉದ್ದೇಶದಿಂದ ಜನತಾ ದರ್ಶನ ಕಾರ್ಯಕ್ರಮ ಏರ್ಪಡಿಸಿದೆ ಎಂದು ಜಿಲ್ಲಾಧಿಕಾರಿ ರಘುನಂದನಮೂರ್ತಿ ತಿಳಿಸಿದರು.

ಪಟ್ಟಣದ ತಹಸೀಲ್ದಾರ ಕಾರ್ಯಾಲಯದಲ್ಲಿ ಮಂಗಳವಾರ ಜರುಗಿದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿಕಲಚೇತನ ಸಂಘದ ತಾಲೂಕಾಧ್ಯಕ್ಷ ಪಾಂಡುರಂಗ ಸುತಾರ ಅರ್ಜಿ ಸಲ್ಲಿಸಿ, ಇಲ್ಲಿನ ಸ್ಟೇಟ್ ಬ್ಯಾಂಕನಲ್ಲಿ ವಿಕಲಚೇತನರು ಆದಾರ ತಿದ್ದುಪಡಿ ಇತ್ಯಾದಿ ಕೆಲಸಗಳಿಗೆ ತೆರಳಿದಾಗ ಕುಳಿತುಕೊಳ್ಳಲು ಆಸನಗಳಿಲ್ಲ, ಸರಿಯಾಗಿ ಸಾರ್ವಜನಿಕರೊಂದಿಗೆ ವರ್ತಿಸುವುದಿಲ್ಲ, ಸಮರ್ಪಕ ಮಾಹಿತಿ ನೀಡುತ್ತಿಲ್ಲ ಹೀಗಾಗಿ ಸಾಕಷ್ಟು ತೊಂದರೆ ಅನುಭವಿಸುತ್ತಿದ್ದೇವೆ ಎಂದು ಅರ್ಜಿದಾರರು ತಿಳಿಸಿದರು.

ಸ್ಥಳದಲ್ಲಿ ಲೀಡ್ ಬ್ಯಾಂಕ ವ್ಯವಸ್ಥಾಪಕ ಅಣ್ಣಯ್ಯರನ್ನು ಕರೆಸಿ, ನೋಡ್ರಿ ಇವರಿಗೆ ಎರಡು ದಿನಗಳೊಳಗೆ ವ್ಯವಸ್ಥೆ ಸರಿಪಡಿಸಿ, ವಿಕಲಚೇತನರು, ಹಿರಿಯ ನಾಗರಿಕರು ಸೇರಿದಂತೆ ಯಾರಿಗೂ ಬ್ಯಾಂಕನಲ್ಲಿ ತೊಂದರೆ ಆಗಬಾರದು. ಮೂಲಭೂತ ಸೌಲಭ್ಯ ಒದಗಿಸಲು ಸೂಚಿಸಿದರು.

ಸೇವಾ ಪುಸ್ತಕ ಸಿಗ್ತಿಲ್ಲ: ನಿವೃತ್ತ ನೌಕರ ಕೆ.ಎನ್. ಹುಚ್ಚೇರ ಮಾತನಾಡಿ, ಎರಡು ದಶಕಗಳಿಗೂ ಹೆಚ್ಚು ಕಂದಾಯ ಇಲಾಖೆಯ ಗ್ರಾಮಲೆಕ್ಕಾಧಿಕಾರಿ ಸೇವೆಯಿಂದ ನಿವೃತ್ತಿ ಹೊಂದಿರುವೆ. ಆದರೆ ನನ್ನ ಎಸ್ಸಾರ್ ಪುಸ್ತಕ ಬೆಂಗಳೂರಿನ ಮಹಾಪಾಲರ ಕಚೇರಿಯಲ್ಲಿ ಕಳೆದಿದೆ ಎನ್ನುತ್ತಿದ್ದಾರೆ. ಎರಡೂವರೆ ವರ್ಷದಿಂದ ನನಗೆ ನ್ಯಾಯ ಸಿಕ್ಕಿಲ್ಲ, ಸಮಸ್ಯೆಗೆ ಪರಿಹರಿಸಲು ವಿನಂತಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ತಹಸೀಲ್ದಾರರಿಗೆ ನೋಡ್ರಿ,ನಿವೃತ್ತ ನೌಕರರನ್ನು ಕಚೇರಿಗೆ ಓಡಾಡಿಸಬೇಡಿ,ಕೂಡಲೆ ಸಂಬಂಧಿಸಿದ ದಾಖಲಾತಿ ಸಿದ್ದಪಡಿಸಿ, ನನಗೆ ಕಳುಹಿಸಿಕೊಡಿ ತಾವು ಖುದ್ದಾಗಿ ಸಮಸ್ಯೆ ಇತ್ಯರ್ಥಪಡಿಸಲು ಬೆಂಗಳೂರು ಮಹಾಪಾಲರ ಕಚೇರಿಗೆ ಮಾತನಾಡುವೆ ಎಂದು ಭರವಸೆ ನೀಡಿದರು.

ಜನತಾ ದರ್ಶನ ಒಟ್ಟು ಅರ್ಜಿಗಳು: ಬ್ಯಾಡಗಿಯ ಜನತಾ ದರ್ಶನದಲ್ಲಿ ಒಟ್ಟು 179 ಅರ್ಜಿಗಳು ದಾಖಲಾಗಿದ್ದು, ಈ ಪೈಕಿ 125 ಅರ್ಜಿಗಳು ಬೆಳೆಹಾನಿ ಎನ್ನಲಾಗಿದೆ. ಇನ್ನುಳಿದಂತೆ ಸರ್ವೆ,ದಾರಿಸ ಸಮಸ್ಯೆ, ಆಧಾರ ಸಮಸ್ಯೆ, ಪಡಿತರ, ಗೃಹಲಕ್ಷ್ಮಿ ವಿವಿಧ ಬೇಡಿಕೆಗಳ ಅರ್ಜಿಗಳಿವೆ. ಇವುಗಳಲ್ಲಿ 18 ವಿವಿಧ ಮಾಶಾಸನ ಅರ್ಜಿಗಳು ಸ್ಥಳದಲ್ಲಿ ಇತ್ಯರ್ಥಗೊಂಡಿವೆ ಎಂದು ತಹಸೀಲ್ದಾರ ಎಸ್.ಎ.ಪ್ರಸಾದ್ ತಿಳಿಸಿದರು.

ಬೆಳಗ್ಗೆ 10.30 ಗಂಟೆಗೆ ಆರಂಭವಾದ ಜನತಾ ದರ್ಶನಕ್ಕೆ ಮೊದಲು ಅರ್ಜಿದಾರರು ಕೊರತೆ ಎದ್ದು ಕಾಣುತ್ತಿತ್ತು. ಮದ್ಯಾಹ್ನ 12 ಗಂಟೆಯ ವೇಳೆಗೆ 100 ಕ್ಕೂ ಹೆಚ್ಚು ಅರ್ಜಿಗಳು ನೊಂದಾವಣೆಯಾದವು. ಸುಮಾರು 20 ನಿಮಿಷಗಳ ಕಾಲ ವಿದ್ಯುತ್ ಕೈಕೊಟ್ಟ ಪರಿಣಾಮ ಅರ್ಜಿದಾರರು ಸರದಿಯಲ್ಲಿ ನಿಂತುಕೊಂಡು ಬಳಿಕ ಅರ್ಜಿ ಸಲ್ಲಿಸಿದರು. ಸಭೆಯ ನಡೆಯುತ್ತಿದ್ದಂತೆ ವಿದ್ಯುತ್ ತೊಂದರೆಯಾಗುತ್ತಿದ್ದಂತೆ ಜಿಲ್ಲಾಧಿಕಾರಿಗಳ ಸಭೆಯಲ್ಲಿ ಅಧಿಕಾರಿಗಳು ಪ್ಯಾನ ಸ್ಥಗಿತಗೊಳ್ಳುತ್ತಿದ್ದಂತೆ ಸಮಸ್ಯೆ ಎದುರಿಸುವಂತಾಯಿತು.

10 ಗಣಕಯಂತ್ರಗಳನ್ನು ತಹಸೀಲ್ದಾರ ಕಾರ್ಯಾಲಯ ಸಂಕೀರ್ಣದಲ್ಲಿ ಸಾರ್ವಜನಿಕರಿಗೆ ಅರ್ಜಿ ನೀಡಲು ವ್ಯವಸ್ಥೆ ಮಾಡಲಾಗಿತ್ತು. ಬಹುತೇಕ ಕಂಪ್ಯೂಟರಗಳಿಗೆ ಸಿಬ್ಬಂದಿಗಳೇ ವೈಫೈ ಸಂಪರ್ಕ ಕೊಟ್ಟುಕೊಂಡು ಕೆಲಸ ನಿರ್ವಹಿಸಿದರು. ಕೆಲವೊಮ್ಮೆ ನೆಟ್‌ವರ್ಕ ಸಮಸ್ಯೆ ಉಂಟಾಗಿ, ಸಿಬ್ಬಂದಿಗಳು ಉಸ್ಸೆನ್ನುತ್ತ ಕುಳಿತರು. 10 ಕಂಪ್ಯೂಟರ್‌ಗಳಲ್ಲಿ ಕೇವಲ ತಲಾ ಆರು ಅರ್ಜಿಗಳು ದಾಖಲಾಗಿದ್ದು, ರೈತರ ಬೆಳೆಹಾನಿ ಅರ್ಜಿ ಪಡೆಯಲು ಒಬ್ಬ ಸಿಬ್ಬಂದಿ ನೇಮಿಸಲಾಗಿತ್ತು. ಅವರ ಬಳಿ 125 ಅರ್ಜಿಗಳು ದಾಖಲಾದವು.

ಈ ವೇಳೆ ಜಿ.ಪಂ.ಮುಖ್ಯ ಕಾರ್ಯನಿರ್ವಾಹಕ ಅಕ್ಷಯ ಶ್ರೀಧರ, ಎಸ್.ಪಿ.ಡಾ.ಶಿವಕುಮಾರ ಗುಣಾದೆ, ಉಪವಿಭಾಗಾಧಿಕಾರಿ ವೀರಮಲ್ಲಪ್ಪ ಪೂಜಾರ, ಡಾ.ಚನ್ನಪ್ಪ ಪೂಜಾರ, ನಗರಾಭಿವೃದ್ಧಿ ಪ್ರಾಧಿಕಾರ ಆಯುಕ್ತ ಡಾ.ನಾಗರಾಜ, ಉಪಕಾರ್ಯದರ್ಶಿ ಸೋಮಶೇಖರ ಮಳ್ಳಳ್ಳಿ, ತಾ.ಪಂ.ಇಒ ಮಲ್ಲಿಕಾರ್ಜುನ ಕೆ.ಎಂ,ತಹಸೀಲ್ದಾರ ಎಸ್.ಎ.ಪ್ರಸಾದ್ ಇದ್ದರು.

ರಸ್ತೆ ದುರಸ್ತಿಗೆ ಅಧಿಕಾರಿಗಳ ವಿಳಂಬ ನೀತಿ ಖಂಡಿಸಿ ಸಾರ್ವಜನಿಕರ ಆಕ್ರೋಶ

ಟಾಟಾ ಏಸ್ ಮೇಲೆ ಉರುಳಿ ಬಿದ್ದ ಕಟ್ಟಿಗೆ ನಾಟಾ ತುಂಬಿದ ಟ್ರ್ಯಾಕ್ಟರ್

ಉದಯಕಾಲ ನ್ಯೂಸ್

ಹಾನಗಲ್ಲ: ಲೋಕೋಪಯೋಗಿ ರಸ್ತೆಯಲ್ಲಿನ ಗುಂಡಿಗೆ ಬಿದ್ದ ಕಟ್ಟಿಗೆ ನಾಟಾ ತುಂಬಿದ ಟ್ರ್ಯಾಕ್ಟರ್, ಟಾಟಾ ಎಸಿ ಗಾಡಿಯ ಮೇಲೆ ಉರುಳಿ ಅಪಘಾತವಾಗಿದ್ದು, ಸುದೈವದಿಂದ ಯಾವುದೇ ಪ್ರಾಣಾಪಾಯವಾಗಿಲ್ಲ. ಅಧಿಕಾರಿಗಳ ರಸ್ತೆ ದುರಸ್ತಿ ವಿಳಂಬ ನೀತಿ ಈ ರಸ್ತೆಯಲ್ಲಿ ಸತತವಾಗಿ ಇಂತಹ ಅವಘಡಗಳಿಗೆ ಕಾರಣವಾಗುತ್ತಿದೆ.

ಮಂಗಳವಾರ ಸಂಜೆ ಹಾನಗಲ್ಲಿನ ತಡಸ ಗೊಂದಿ ಮುಖ್ಯ ರಸ್ತೆಯಲ್ಲಿ ಉದಾಸಿ ಕಲ್ಯಾಣ ಮಂಟಪದ ಬಳಿ ಆನಿಕೆರೆ ಕಡೆಯಿಂದ ಬಸ್‌ಡಿಪೋದತ್ತ ತೆರಳುತ್ತಿರು ಕಟ್ಟಿಗೆ ನಾಟಾ ತುಂಬಿದ ಟ್ರ್ಯಾಕ್ಟರ್ ರಸ್ತೆಯಲ್ಲಿನ ತಗ್ಗಿಗೆ ಬಿದ್ದು ಉರುಳಿದೆ. ಪಕ್ಕದಲ್ಲಿಯೇ ಹೋಗುತ್ತಿರುವ ಇನ್ನೊಂದು ಟಾಟಾ ಎಸಿ ವಾಹನದ ಮೇಲೆ ಉರುಳಿದ ಪರಿಣಾಮವಾಗಿ ಎರಡೂ ಗಾಡಿಗಳು ನುಜ್ಜು ಗುಜ್ಜಾಗಿವೆ. ಆದರೆ ಸುದೈವವಶಾತ್ ಯಾವುದೇ ಪ್ರಾಣಪಾಯವಾಗಿಲ್ಲ ಎಂಬುದೇ ಸಮಾಧಾನದ ಸಂಗತಿ. ಅತ್ಯಂತ ಜನನಿಬಿಡವಾದ ಈ ರಸ್ತೆಯಲ್ಲಿ ಇಂತಹ ಘಟನೆಗಳಿಗೆ ಈ ರಸ್ತೆ ದುರಸ್ಥಿಯಾಗದಿರುವುದು ಕಾರಣವಾಗಿದೆ. ರಸ್ತೆ ದುರಸ್ತಿಗಾಗಿ ಸಾರ್ವಜನಿಕರು ಕೋರಿಕೊಂಡದ್ದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಕೇಳಿಸುತ್ತಿಲ್ಲ. ಕಳೆದ ಐದಾರು ತಿಂಗಳಿನಿಂದ ಇದಕ್ಕಾಗಿ ಹತ್ತು ಹಲವು ಹೋರಾಟಗಳಾದರೂ ಕೂಡ ಈ ರಸ್ತೆ ದುರಸ್ಥಿಗೆ ಮುಂದಾಗದಿರುವುದು ಸಾರ್ವಜನಿಕರ ಅಸಮಧಾನಕ್ಕೆ ಕಾರಣವಾಗಿದೆ.

ಈ ಕುರಿತು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಈ ರಸ್ತೆ ದುರಸ್ಥಿಗಾಗಿ ಟೆಂಡರ್ ಕರೆಯಲಾಗಿದೆ. ಇದೊಂದೇ ಅಲ್ಲ ಇದರೊಂದಿಗೆ ಇನ್ನೂ ಹಲವು ರಸ್ತೆ ದುರಸ್ಥಿಗೆ ಆದೇಶಿಸಿ ಟೆಂಡರ್ ಪ್ರಕ್ರಿಯೇ ಮುಗಿದಿದೆ. ನಾವು ಕೂಡ ಗುತ್ತಿಗೆದಾರರ ಮೇಲೆ ಒತ್ತಡ ಹಾಕುತ್ತಿದ್ದೇವೆ. ಆದರೆ ಕೆಲಸವಾಗುತ್ತಿಲ್ಲ. ಈ ಕೂಡಲೇ ದುರಸ್ತಿ ಆರಂಭಿಸುತ್ತೇವೆ ಎನ್ನುತ್ತಾರೆ. ಈ ರೀತಿಯ ಒತ್ತಡಗಳು ಅನೇಕ ಬಾರಿ ಆಗಿವೆ. ಆದರೆ ಅಧಿಕಾರಿಗಳ ವಿಳಂಬ ನೀತಿಗೆ ಕಾರಣ ತಿಳಿಯುತ್ತಿಲ್ಲ.

ಈ ತಡಸ ಗೊಂದಿ ರಸ್ತೆ ಅಗಲೀಕರಣವಾಗಬೇಕು. ಇದು ಜನನಿಬಿಡ ರಸ್ತೆ. ಪಟ್ಟಣದ ಮುಖ್ಯ ರಸ್ತೆ ಎಂದು ಇದಕ್ಕಾಗಿ ಹಾನಗಲ್ಲ ಬಂದ್ ಮಾಡಿ ಆಡಳಿತವನ್ನು ಎಚ್ಚರಿಸಲಾಗಿತ್ತು. ಆದರೆ ಅಗಲೀಕರಣದ ಬಗ್ಗೆ ನಿಖರ ಮಾಹಿತಿ ಯಾರಿಗೂ ದೊರೆಯುತ್ತಿಲ್ಲ. ಈ ಕಾರಣಕ್ಕೆ ಇದರ ದುರಸ್ಥಿಯೂ ಕೂಡ ಸಕಾಲಿಕವಾಗಿ ಆಗುತ್ತಿಲ್ಲ. ವಾಹನಗಳು ಬೀಳುವುದು, ಢಿಕ್ಕಿ ಹೊಡಿಯುವುದು, ಮಳೆ ಬಂದಾಗಲಂತೂ ದೊಡ್ಡ ಅವಾಂತರಕ್ಕೆ ಕಾರಣವಾಗುವ ಈ ರಸ್ತೆ ಬೇಗ ದುರಸ್ತಿ, ಅಗಲೀಕರಣ

> ರಸ್ತೆ ದುರಸ್ಥಿಗೆ ಆಗಲೇ ಟೆಂಡರ್ ಆಗಿದೆ. ಇವತ್ತು ಮತ್ತೆ ಗುತ್ತಿಗೆದಾರರಿಗೆ ತಿಳಿಸಿ ನಾಳೆಯಿಂದಲೇ ರಸ್ತೆ ದುರಸ್ಥಿಗೆ ತಿಳಿಸಲಾಗಿದೆ. ಸಕಾಲಿಕವಾಗಿ ದುರಸ್ಥಿ ಮಾಡಲು ಎಲ್ಲ ಪ್ರಯತ್ನ ಮಾಡಲಾಗಿದೆ. ಸ್ವಲ್ಪ ವಿಳಂಬವಾಗಿದೆ. ಕೂಡಲೇ ಸಾರ್ವಜನಿಕರ ಹಿತಕ್ಕಾಗಿ ದುರಸ್ಥಿಗೆ ಕಾಳಜಿ ವಹಿಸುತ್ತೇವೆ. ಇದರೊಂದಿಗೆ ಇನ್ನೂ ಹಲವು ರಸ್ತೆ ದುರಸ್ಥಿಗೆ ಟೆಂಡರ್ ಆಗಿದೆ. ಎಲ್ಲವನ್ನೂ ಸಕಾಲಿಕವಾಗಿ ಪೂರ್ಣಗೊಳಿಸಲಾವುದು.
>
> – ಎಸ್. ನಾರಾಜ, ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ, ಲೋಕೋಪಯೋಗಿ ಇಲಾಖೆ

ಕಂಡು ಜನರು ನೆಮ್ಮದಿಯಿಂದ ಈ ರಸ್ತೆಯಲ್ಲಿ ಓಡಾಡುವಂತಾಗಬೇಕು ಎಂಬುದು ಸಾರ್ವಜನಿಕರ ಒತ್ತಾಸೆಯಾಗಿದೆ.

ಇಂದು ವಾಹನ ಬಿದ್ದುದರಿಂದ ಪೊಲೀಸ ಸಿಬ್ಬಂದಿ ರಸ್ತೆ ಸಂಚಾರಕ್ಕೆ ತೊಂದರೆಯಾಗದಂತೆ ವಾಹನಗಳನ್ನು ಬೇರೆ ದಾರಿಯ ಮೂಲಕ ಸಂಚರಿಸಲು ಮಾರ್ಗ ಸೂಚಿಸಿ ವಾಹನ ಸಂಚಾರವನ್ನು ಸುಗಮಗೊಳಿಸಿದರು. ಸಂಜೆ ಹೊತ್ತಿಗೆ ದಾರಿಯಲ್ಲಿ ಮುಗಿಚಿದ್ದ ಎರಡೂ ವಾಹನ ತೆಗೆಯಲು ಮುಂದಾದರು.

ಪಟ್ಟಣದ ಹಳೆ ಬಸ್ ನಿಲ್ದಾಣದಿಂದ ಮಹಾತ್ಮಾಗಾಂಧಿ ವೃತ್ತದವರೆಗೆ ವಾಹನಗಳ ಓಡಾಟ ತೀರ ಕಷ್ಟಕರ. ಜನರೂ ಅತ್ಯಂತ ಜಾಗರೂಕರಾಗಿ ಇಲ್ಲಿ ಓಡಾಡುವಂತಾಗಿದೆ. ಇಲ್ಲಿ ಈ ಹಿಂದೆ ಇಂತಹ ಹಲವು ಅವಗಡಗಳು ನಡೆದಿವೆ. ಆದರೂ ಇಲಾಖೆ ಎಚ್ಚತ್ತುಕೊಂಡಿಲ್ಲ. ಇದನ್ನು ಲೋಕೋಪಯೋಗಿ ಇಲಾಖೆ ಅರಿತು ಸಕಾಲಿಕವಾಗಿ ದುರಸ್ಥಿ ಮಾಡಬೇಕಾಗಿತ್ತು. ತಾಲೂಕಿನ ಎಲ್ಲ ಅಧಿಕಾರಿಗಳೂ ಇದೇ ರಸ್ತೆ ಮೂಲಕ ನಿತ್ಯ ಪ್ರಯಾಣ ಮಾಡುತ್ತಾರೆ. ಆದರೆ ಯಾರಿಂದಲೂ ಈ ಸಮಸ್ಯೆ ಪರಿಹಾರ ಸಾಧ್ಯವೇ ಇಲ್ಲವೆ ಎಂಬ ಸ್ಥಿತಿ ಇಲ್ಲಿ ಕಾಣುತ್ತದೆ.

ತಾಂತ್ರಿಕ ತೊಂದರೆ ಸರಿಪಡಿಸಿ ಅರ್ಹ ಫಲಾನುಭವಿಗೆ ಯೋಜನೆ ಲಾಭ ದೊರಕಿಸಿ: ಶಾಸಕ ಶ್ರೀನಿವಾಸ ಮಾನೆ

ಉದಯಕಾಲ ನ್ಯೂಸ್

ಹಾನಗಲ್: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಗೃಹಲಕ್ಷ್ಮೀ' ಯೋಜನೆಯಡಿ ಕೆಲ ಫಲಾನುಭವಿಗಳಿಗೆ ತಾಂತ್ರಿಕ ತೊಂದರೆಯಿಂದ 2 ಸಾವಿರ ರೂ. ಹಣ ಸಂದಾಯವಾಗಿರುವುದಿಲ್ಲ. ತಕ್ಷಣವೇ ತಾಂತ್ರಿಕ ತೊಂದರೆ ಸರಿಪಡಿಸಿ ಅರ್ಹ ಫಲಾನುಭವಿಗಳಿಗೆ ಯೋಜನೆಯ ಲಾಭ ದೊರಕಿಸುವಂತೆ ಶಾಸಕ ಶ್ರೀನಿವಾಸ ಮಾನೆ ಅವರು ಸಿಡಿಪಿಒ ರಂಗನಾಥ ಸಿ. ಅವರಿಗೆ ಸೂಚಿಸಿದರು.

ಇಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, 'ಗೃಹಲಕ್ಷ್ಮೀ' ಯೋಜನೆಯ ಪ್ರಗತಿ ಪರಿಶೀಲಿಸಿ, ಯಾವುದೇ ಕಾರಣಕ್ಕೂ ಅರ್ಹ ಫಲಾನುಭವಿಗಳು ಯೋಜನೆಯಿಂದ ವಂಚಿತರಾಗಬಾರದು. ಯಾವ ಕಾರಣಕ್ಕೆ ಹಣ ವರ್ಗಾವಣೆ ಸಾಧ್ಯವಾಗಿಲ್ಲ ಎನ್ನುವ ಕುರಿತು ಮಾಹಿತಿ ನೀಡಿ, ತಾಂತ್ರಿಕ ತೊಂದರೆ ಸರಿಪಡಿಸಿದ ತಕ್ಷಣವೇ ಹಣ ವರ್ಗಾವಣೆಗೆ ಕ್ರಮ ಕೈಗೊಳ್ಳುವಂತೆ

ಕಟ್ಟುನಿಟ್ಟಿನ ಸೂಚನೆ ನೀಡಿದರು.

ತಾಲೂಕಿನಲ್ಲಿ ಗೃಹಲಕ್ಷ್ಮೀ ಯೋಜನೆಯಡಿ ಇದುವರೆಗೆ 59,800 ಫಲಾನುಭವಿಗಳು ನೋಂದಾವಣೆ ಮಾಡಿಕೊಂಡಿದ್ದು, 47,000 ಫಲಾನುಭವಿಗಳ ಖಾತೆಗೆ ಆಗಸ್ಟ್ ತಿಂಗಳ ಹಣ ವರ್ಗಾಯಿಸಲಾಗಿದೆ. ಇನ್ನುಳಿದ ಫಲಾನುಭವಿಗಳಿಗೆ ವಿವಿಧ ಕಾರಣಗಳಿಂದ ಹಣ ವರ್ಗಾವಣೆ ಸಾಧ್ಯವ